ಕಥೆ

# ಇಂಡಿಯನ್ ಸಮ್ಮರ್

■ ಕನಕರಾಜ್ ಆರನಕಟ್ಟೆ
ಕಲೆ: ಎಸ್.ವಿ. ಹೂಗಾರ್



ಪ್ರತಿ ಚಳಿಗಾಲದ ನಂತರ ಬರುವ ಬಾಹ್‌ಬಿ ಯೇತಾ ದಿನಗಳು ಆಂಡ್ರಿಯಾ ವೊಲ್ಕೊವಾಳಿಗೆ ಕಳೆದ ಮೂರು ವರ್ಷಗಳಿಂದ ತಾಳಲಾಗದ ನೋವನ್ನು ನೀಡುತ್ತಿವೆ. ಒಮ್ಮೊಮ್ಮೆ ಚಳಿಗಾಲದ ಮಧ್ಯೆಯೇ ದಿಢೀರೆಂದು ಸೂರ್ಯ ಬೇಸಿಗೆಯಲ್ಲಿ ಉರಿಯುವವನಂತೆ ಉರಿದು ಇಲ್ಲಿ ಕೆಲವರ ಆರೋಗ್ಯವನ್ನು ಏರುಪೇರು ಮಾಡಿಬಿಡುತ್ತಾನೆ. ಆದರೆ ಹಲವರಿಗೆ ಚಳಿಗಾಲದಲ್ಲಿ ಬರುವ ಈ ಕಡು ಬಿಸಿಲಿನ ದಿನಗಳು ಹೊಸ ಉತ್ಸಾಹವನ್ನು ನೀಡುತ್ತವೆ. ಅದೂ ಮಾಸ್ಕೊದಂತಹ ಈ ಊರಲ್ಲಿ ಆ ದಿನಗಳಿಗೆ ವಿಶಿಷ್ಟ ಹೊಳಪಿದೆ. ಈ ದಿನಗಳನ್ನು ರಷ್ಯನ್‌ನಲ್ಲಿ ಹಾಗೇ ಕರೆಯುವುದು, 'ಬಾಹ್‌ಬಿ ಯೇತಾ' ಎಂದು. ಯೂರೋಪ್, ಅಮೆರಿಕ, ಕೆನಡಾಗಳಲ್ಲಿ ಈ ದಿನಗಳನ್ನು 'ಇಂಡಿಯನ್ ಸಮ್ಮರ್' ಎಂದು ಕರೆಯುವುದು ಯಾಕಾಗಿ ಎಂಬುದು ಅರ್ಥವಾಗದೆ ಒಮ್ಮೊಮ್ಮೆ ಆಂಡ್ರಿಯಾ ವೊಲ್ಕೊವಾ ತಲೆ ಕೆಡಿಸಿಕೊಂಡಿದ್ದಾಳೆ. ಹತ್ತು ಹನ್ನೆರೆಡು ವಯಸ್ಸಿನ ತನ್ನ ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗಳಿಗೆ ಕೆಲವೊಮ್ಮೆ ಉತ್ತರ ದೊರಕದೆ ಅವಳು ತಬ್ಬಿಬ್ಬಾಗಿ ನಿಂತಿದ್ದೂ ಇದೆ. 'ಚಳಿಗಾಲದಲ್ಲಿ ಯಾಕೆ ಬೇಸಿಗೆಯಂತಹ ದಿನಗಳು ಬರುತ್ತವೆ ಎನ್ನುವುದು ಒತ್ತಟ್ಟಿಗಿರಲಿ, ಈ ದಿನಗಳನ್ನು ಯಾಕೆ ಇಂಡಿಯನ್ ಸಮ್ಮರ್ ಎಂದು ಕರೆಯುವುದು ಎನ್ನುವುದನ್ನು ಹೇಳಿ ಮೇಮ್...' ಎನ್ನುವುದೇ ಅವರ ಪ್ರಶ್ನೆ! ಇವಳಿಗೆ ತಕ್ಷಣ ಏನು ಹೇಳುವುದೆಂದು ಗೊತ್ತಾಗದೆ ಹೇಗೊ ನಿಭಾಯಿಸಿ ಸಂಜೆ ಮನೆಗೆ ಬರುತ್ತಿರುವಾಗಲೇ ಅವನನ್ನು ನೋಡಿದ್ದು.

ನಂತರವೇ ಅವೆಲ್ಲವೂ ಸಂಭವಿಸಿದ್ದು; ಗತಿಸಿ ಮಾಯವಾದದ್ದು. ಪ್ರಕೃತಿಯ ಮೇಲೆ ಇವಳಿಗೆ ಅಗಾಧ ಕೋಪ ಬರುವ ಗಳಿಗೆಗಳಲ್ಲಿ ಇಂಡಿಯನ್ ಸಮ್ಮರ್ ದಿನಗಳು ಮೊದಲ ಸಾಲಿನವು.

ಚಳಿಗಾಲ ಆರಂಭವಾದುದೇ ಈ ಮಧ್ಯೆ ಅವಳೊಳಗೆ ಆತಂಕ, ಸಿಟ್ಟು, ನೋವುಗಳು ಗರಿಬಿಚ್ಚಿ ಕಣ್ಣುಗಳ ಕೆಣಕುತ್ತವೆ. ಇಂಡಿಯನ್ ಸಮ್ಮರ್ ದಿನಗಳು ಸಮೀಪಿಸುತ್ತಿರುವಂತೆ ಖರ್ಚಾದರೂ ಸರಿ ಎಂಬಂತೆ ಅವಳು ಯಾವುದಾದರೂ ದೇಶಕ್ಕೆ ಹೋಗಿ ಆರಾಮಾಗಿ ಇರಲು ಬಯಸುತ್ತಾಳೆ. ತನ್ನ ಮಗಳನ್ನು ಸ್ನೇಹಿತೆಯ ಬಳಿ ಬಿಟ್ಟು ಕಾಣದ ಊರಿನ ಅಪರಿಚಿತರ ನಡುವಿನ ಹೆಜ್ಜೆಗಳಲ್ಲಿ ಕಳೆದುಹೋಗುತ್ತಾಳೆ. ಮಾಸ್ಕೋದಲ್ಲಿ ಮತ್ತೆ ಚಳಿಗಾಲ ಆರಂಭವಾಗುತ್ತಿದ್ದಂತೆ ವಾಪಸ್ ಬಂದು ಹೊಸ ಉತ್ಸಾಹದಲ್ಲಿ ಚಿಮ್ಮುತ್ತಾಳೆ. ಹಾಗೆ ಕಳೆದುಹೋಗಿ ಹೊಸದಾಗಿ ಚಿಮ್ಮಲು ಈ ವರ್ಷ ಅವಳು ಆರಿಸಿಕೊಂಡ ದೇಶ ಸ್ವಾಲ್‌ಬಾಡ್! ಆರು ತಿಂಗಳು ಬೆಳಕೇ ಕಾಣದ, ಬಾಕಿ ಆರು ತಿಂಗಳು ರಾತ್ರಿಗಳೇ ಇಲ್ಲದ ವಿಶಿಷ್ಟ ದ್ವೀಪ ಸಮೂಹಗಳ ರಾಷ್ಟ್ರಕ್ಕೆ ಬೇಸಿಗೆಯಲ್ಲೇ ಹೋಗಬೇಕೆಂಬುದು ಅವಳ ಆಸೆಯಾಗಿತ್ತು. ಆದರೆ ಮೂರು ವರ್ಷಗಳ ಹಿಂದಿನ ಇಂಡಿಯನ್ ಸಮ್ಮರ್ ಮಾಡಿದ ಅನಾಹುತಗಳ ಕಾರಣಕ್ಕಾಗಿ ಚಳಿಗಾಲದಲ್ಲೇ ಅಲ್ಲಿಗೆ ಹೋಗಬೇಕೆಂದು ತೀರ್ಮಾನಿಸಿದ್ದಳು. ದಿನದ ಇಪ್ಪತ್ನಾಲ್ಕು ಗಂಟೆಯೂ ಹಿಮವನ್ನು ಸುರಿಸುವ ಕತ್ತಲನ್ನು ನೋಡುತ್ತಾ ಇಹಲೋಕದ ಪರಿವೆಯೇ ಇಲ್ಲದಂತೆ ಅಲ್ಲಿ ಇದ್ದುಬಿಡಬೇಕು ಎಂದು ಹೊರಟಿದ್ದಳು.

ಸ್ವಾಲ್‌ಬಾಡ್‌ನ ಲಾಂಗಿಯರ್ ಬೈನ್ ನಗರದ ಒಂದು ಸ್ಟುಡಿಯೊ ಅಪಾರ್ಟ್‌ಮೆಂಟಲ್ಲಿ ಉಳಿದದ್ದ ಆಂಡ್ರಿಯಾ ವೊಲ್ಕೊವಾ ಹಿಮದಿಂದ ತುಂಬಿ ಮರಗಟ್ಟಿದ್ದ ದಿನದ ಇಪ್ಪತ್ನಾಲ್ಕು ಗಂಟೆಯ ಕತ್ತಲನ್ನು ಮತ್ತು ಅಸ್ಪಷ್ಟವಾಗಿ ಕಾಣುತ್ತಿದ್ದ ಹಿಮಗುಡ್ಡೆಗಳನ್ನು ಕಿಟಕಿಯಿಂದ ನೋಡುತ್ತಾ ಆಗಾಗ ವೋಡ್ಕಾ ಸೇವಿಸುತ್ತ ಕೂರುತ್ತಿದ್ದಳು. ಇಂಡಿಯನ್ ಸಮ್ಮರ್ ಮಾತ್ರವಲ್ಲ, ಇಡೀ ರಷ್ಯಾವನ್ನೇ ಮರೆತವಳಂತೆ ನಿದ್ರಿಸುತ್ತಿದ್ದಳು. ವಾರ ಕಳೆದರೂ ಕಿಂಚಿತ್ತೂ ಬೇಸರವಿಲ್ಲದೆ ಚಳಿಗಾಲದ ಒಂಟಿತನದಲ್ಲಿ ಸುಖಿಸುತ್ತಿದ್ದಳು. ಕತ್ತಲಿನ ದೀರ್ಘ ನಡೆಯನ್ನು ಮೌನದಿಂದ ನೋಡುತ್ತಾ ಸೂರ್ಯನನ್ನು ನೋಡದೆ ಹೀಗೇ ಇದ್ದು ಬಿಟ್ಟರೆ ಹೇಗೆ ಎಂದು ಯೋಚಿಸಿದ್ದೂ ಇದೆ. ಆ ತರ್ಲೆ ಜೊತೆಗೆ ಇದ್ದಿದ್ದರೆ ಹಿಮಪರ್ವತಗಳ ಮೇಲೇರಿ ಸ್ವರ್ಗವನ್ನು ಕಾಣಬಹುದಾಗಿತ್ತು...! ಛೆ... ಗಂಡಸರಿಗೆ ಎಲ್ಲವೂ ವ್ಯವಹಾರ... ಹೆಂಡತಿಯ ಜೊತೆಗಿನ ಕಾಮವೂ... ತಾನೇನು ಕಡಿಮೆಯೇ! ಅವನಿಂದ ಕೆಲಸವಾಗಬೇಕು ಎಂದಾಗ ಅಂಗಾಂಗಗಳ ಕೆಣಕಿಸಿ ಅವನನ್ನು ಎಳೆಯುತ್ತಿರಲಿಲ್ಲವೇ! ಹಾ... ಮಾಸ್ಕೊಗೆ ಹೋದದ್ದೇ ಅವನನ್ನು ಸಂಪರ್ಕಿಸೋಣವೇ!? ಬೇಡ... ಅವನೇ ಬರಲಿ...

ಆಂಡ್ರಿಯಾ ವೊಲ್ಕೊವಾ ಮಂಚದ ಮೇಲೆ ಮಲಗಿದ್ದಳು. ಅವಳ ಎಡಭಾಗಕ್ಕೆ ಮೊಬೈಲ್ ಮತ್ತು ದೂರದಲ್ಲಿ ದಪ್ಪ ರಟ್ಟಿನ 'ಅನ್ನಾ ಕರೆನಿನಾ' ಕಾದಂಬರಿ! 19ನೇ ಶತಮಾನದ ರಷ್ಯಾ ಬರಹಗಾರರು ಸಾವಿರಾರು ಪುಟಗಳ ಬೃಹತ್ ಕಾದಂಬರಿಗಳನ್ನು ಬರೆಯುತ್ತಿದ್ದುದು